ಮಾಡುತ್ತಿದ್ದ. ಅಲ್ಲಿ ಒಂದು ಮೂಲೆಯಲ್ಲಿ ತೆಂಗಿನ ಯಡಮೊಟ್ಟೆ, ತೆಂಗಿನ ಸಿಪ್ಪೆ, ಚಿಪ್ಪುಗಳು ಸಹ ಇದ್ದವು.

ಆ ಮನೆಯು ಹಳೆಯದಾದರೂ ಗಟ್ಟಿಮುಟ್ಟಾಗಿತ್ತು ಮತ್ತು ವಿಶಾಲವಾದುದಾಗಿತ್ತು. ಕನಿಷ್ಠ ನೂರು ವರ್ಷದ ಕೆಳಗೆ ಖರೀದಿಸಿದ್ದ ಎರಡು ಎಕರೆ ಜಮೀನಿನ ಮಧ್ಯದಲ್ಲಿ ಕಟ್ಟಿಸಿದ್ದ ಮನೆ ಅದಾಗಿತ್ತು. ಮನೆಯ ಸುತ್ತಲೂ ತೋಟವಿತ್ತು. ಮನೆಯ ಎಲ್ಲರೂ ಈ ಕ್ಷಣದಲ್ಲಿ ತೋಟವನ್ನು ಸೈಟ್ ಮಾಡಿ ಮಾರಲು ರೆಡಿ ಇದ್ದರು. ಬರುವ ಕೋಟ್ಯಂತರ ರೂಪಾಯಿ ಹಣವು ಅವರ ಕನಸುಗಳನ್ನು ರಂಗೇರಿಸಿತ್ತು. ಆದರೆ ಹಿರಿಯಜ್ಜನದೇ ಅಡ್ಡಿಯಾಗಿತ್ತು. ಆ ತೋಟದ ಸುತ್ತ ನಗರವೆಂಬುದು ಬೆಳೆದು ಗಿಜಿಗುಡುತ್ತಿತ್ತು. ಸ್ವಲ್ಪ ಸಡಿಲ ಬಿಟ್ಟರೆ ತೋಟದ ಕತ್ತು ಹಿಸುಕಲು ಹೊಂಚು ಹಾಕಿ ಕಾಯುತ್ತಿತ್ತು.

ಅಮೆರಿಕದಿಂದ ಮೊಮ್ಮಗ ಬರುವುದು ಇನ್ನೊಂದು ವಾರವಿತ್ತು. ನವೀಕರಣಗೊಂಡ ಬಚ್ಚಲು ಮನೆಗೀಗ ವಾಷ್‌ರೂಂ ಎಂದು ಕರೆಯುತ್ತಿದ್ದರು. ವಾಷ್‌ರೂಮಿನ ಒಳಗನ್ನು ಹಿರಿಯಜ್ಜ ನೋಡಿರಲಿಲ್ಲ. ಅದುವರೆಗೆ ತೋಟದಲ್ಲಿದ್ದ ಇನ್ನೊಂದು ಬಚ್ಚಲು, ಕಕ್ಕಸು ರೂಮುಗಳನ್ನು ತಾತ್ಕಾಲಿಕವಾಗಿ ಎಲ್ಲರೂ ಬಳಸುತ್ತಿದ್ದರು. ಇಂದಿನಿಂದ ನವೀಕರಣಗೊಂಡ ವಾಷ್‌ರೂಮನ್ನು ಬಳಸಬಹುದೆಂದು ಎಲ್ಲರೂ ಹೇಳತೊಡಗಿದರು.

ಅಂದು ಬೆಳಗ್ಗೆ ಹಿರಿಯಜ್ಜ ಎಂದಿನಂತೆ ಮನೆಯ ಬಾಗಿಲು ದಾಟಿ ತೋಟ ಸುತ್ತಲು ಹೊರಟ. ಬೆಳಗಿನ ಎಳೆ ಬಿಸಿಲು ಚುರುಗುಟ್ಟುತ್ತಿತ್ತು. ಬಾಲೆಗೆ ರಜಾ ಇದ್ದುದರಿಂದ ಅವಳೂ ಜೊತೆಯಲ್ಲಿದ್ದಳು. ಹಿರಿಯನಿಗೆ ತನ್ನ ಜಮೀನಿನಲ್ಲಿ ಅಲ್ಲಲ್ಲಿ ನಿಂತು ಮರಗಳ ಮುಟ್ಟಿ ಮಾತಾಡಿಸುತ್ತ ಗಂಟೆಗಟ್ಟಲೆ ತೋಟ ಸುತ್ತುವುದು ರೂಢಿ. ಆದರೆ ಇಂದು ಹಿರಿಯಜ್ಜ ರಾವು ಹೊಡೆದಂತಿದ್ದ. ಹಿಂದಿನ ದಿನ ಮನೆಯಲ್ಲಿ ನಡೆದ ವಿದ್ಯಮಾನದಿಂದ ಹಿರಿಯಜ್ಜ ಕನಲಿ ಹೋಗಿದ್ದ.

ಮನೆಯಲ್ಲಿ ಎಲ್ಲ ರೂಮುಗಳಿಗಿನ್ನ ಹಿರಿಯಜ್ಜನ ರೂಮು ಇಕ್ಕಟ್ಟಿನದಾಗಿತ್ತು. ಯಾಕೆಂದರೆ ಆ ರೂಮಿನಲ್ಲಿ ಪುಸ್ತಕದ ನಾಲ್ಕು ಕಬ್ಬಿಣದ ಕಂಬಿಯ ರ್‍ಯಾಕುಗಳಿದ್ದವು. ಆ ರ್‍ಯಾಕುಗಳಲ್ಲಿ ಪುಸ್ತಕಗಳು ತುಂಬಿ ತುಳುಕುತ್ತಿದ್ದವು. ಇಷ್ಟಲ್ಲದೆ ಮನೆಯ ನಾಲ್ಕಾರು ಸಜ್ಜಗಳಲ್ಲಿ ಹಿರಿಯಜ್ಜನ ಪುಸ್ತಕಗಳು ಜೋಡಿಸಲ್ಪಟ್ಟಿದ್ದವು. ಅದರಲ್ಲಿ ಹಿರಿಯಜ್ಜ 50-60 ವರ್ಷಗಳ ಹಿಂದಿಂದ ಖರೀದಿಸಿದ್ದ ಪುಸ್ತಕಗಳಿದ್ದವು. ಹಿರಿಯಜ್ಜನು ಪುಸ್ತಕಗಳನ್ನು ಓದುತ್ತ ಎಲ್ಲೆಂದರಲ್ಲಿ ಬಿಟ್ಟಿರುತ್ತಿದ್ದುದರಿಂದ ಮನೆ ತುಂಬ ಪುಸ್ತಕಗಳು ಹರಡಿಕೊಂಡಿರುತ್ತಿದ್ದವು. ಇದರಿಂದ ಲೆಕ್ಚರರ್, ಇಂಜಿನಿಯರರ ಯಾರಾದರೂ ಅತಿಥಿಗಳು ಮನೆಗೆ ಬಂದರೆ ಅವರಿಗೆ ಕುಳಿತುಕೊಳ್ಳಲು ಜಾಗವಿಲ್ಲದಂತೆ ಕುರ್ಚಿ, ಸೋಫಾದ ಮೇಲೆ ಪುಸ್ತಕಗಳಿರುತ್ತಿದ್ದವು. ಆ ಪುಸ್ತಕಗಳನ್ನು ಎತ್ತಿ ರ್‍ಯಾಕ್‌ನಲ್ಲಿಟ್ಟಿದ್ದರೆ ಮುಗಿದು ಹೋಗುತ್ತಿದ್ದ ಸಣ್ಣ ಕೆಲಸ ಅವರಿಗೆ ಕಿರಿಕಿರಿಯಾಗುತ್ತಿತ್ತು. ಇವರಾಗಲಿ, ಇವರ ಮಡದಿಯರಾಗಲಿ ಮನೆಯಲ್ಲಿದ್ದ ಒಂದೇ ಒಂದು ಪುಸ್ತಕವನ್ನೂ ಓದಿರಲಿಲ್ಲ. ಅವರಿಗೆ ಸಾಹಿತ್ಯದ ಓದು ಲಾಭದಾಯಕವಾಗಿ ಕಂಡಿರಲಿಲ್ಲ. ಮನೆಯಲ್ಲಿದ್ದ ಸಾವಿರಾರು ಪುಸ್ತಕಗಳ ಸಮಸ್ಯೆಯಿಂದ ಪಾರಾಗಲು ಅವರು ಸರಿಯಾದ ಸಮಯಕ್ಕೆ ಕಾಯುತ್ತಿದ್ದರು.

ಮನೆಯ ಪೀಠೋಪಕರಣಗಳು, ಇಟಾಲಿಯನ್ ಕಿಚನ್ ಮುಂತಾದವನ್ನು ಮಾಡಲು ಗೃಹ ಆಂತರಿಕ ವಿನ್ಯಾಸಕರಿಗೆ ಹೇಳಿದ್ದರು. ಅವರು ಮನೆಯ ಅಡುಗೆಮನೆ, ಹಾಲು ಮುಂತಾದ ಎಲ್ಲ ರೂಮುಗಳ ಅಳತೆ ತೆಗೆದುಕೊಂಡು ಮನೆಗೆ ಸರಿಹೊಂದುವಂತಹ ಪೀಠೋಪಕರಣಗಳನ್ನು ಫ್ಯಾಕ್ಟರಿಯಲ್ಲಿ ಮಾಡಿಸಿಕೊಂಡು ಮನೆಗೆ ತಂದು ಜೋಡಿಸಿದ್ದರು. ಇದಾವುದೂ ಹಿರಿಯಜ್ಜನ ಗಮನಕ್ಕೆ ಬಂದಿರಲಿಲ್ಲ. ಹಿರಿಯಜ್ಜ ಅಡುಗೆಮನೆಯ ಆಧುನೀಕರಣ ಮತ್ತು ಹಳತಾದ ಕುರ್ಚಿ, ಟೇಬಲ್, ಮಂಚಗಳ ಬದಲಿಗೆ ಬಂದಿದ್ದ ಹೊಸ ವಸ್ತುಗಳನ್ನು ನೋಡಿದ. ಅವನ ನಾಲ್ಕು ಪುಸ್ತಕದ ರ್‍ಯಾಕ್‌ಗಳನ್ನು ಗುಜರಿಗೆ ಹಾಕಿ ಒಂದೇ ಒಂದು ನೀಟಾದ ಪುಸ್ತಕದ ಕಪಾಟನ್ನು ಮಾಡಿಸಿದ್ದರು. ಅದರಲ್ಲಿ ಹೊಸತಾದ ಮತ್ತು ನೀಟಾಗಿ ಕಾಣುತ್ತಿದ್ದ ಕೆಲವೇ ಕೆಲವು ಪುಸ್ತಕಗಳನ್ನು ಮಾತ್ರ ಜೋಡಿಸಿದ್ದರು. ಹಳತಾದ ಎಲ್ಲ ಪುಸ್ತಕಗಳೂ ತೂಕದ ಲೆಕ್ಕದಲ್ಲಿ ರದ್ದಿ ಅಂಗಡಿ ಸೇರಿದವು. ಹಳೆಯ ಪುಸ್ತಕಗಳ ವಾಸನೆ ತಮಗೆ ಅಲರ್ಜಿಯಾಗುವುದರಿಂದ ಮತ್ತು ಪುಸ್ತಕಗಳ ಮುಖಪುಟಗಳು ಮಡಚಿಕೊಂಡು ತಮ್ಮ ನವೀಕರಣಗೊಂಡ ಮನೆಯ ಗೆಟಪ್ಪಿಗೆ ಹೊಂದಿಕೆಯಾಗದಿರುವುದರಿಂದ ಅವನ್ನೆಲ್ಲ ರದ್ದಿ ಅಂಗಡಿಗೆ ಸಾಗಿಸಿದ್ದಾಗಿ ಅಜ್ಜನಿಗೆ ಸಮಜಾಯಿಷಿ